ಯಾತ್ರಿನಿವಾಸ ನಿರ್ಮಾಣ

250 ಶ್ರೀ ಗೋಪಾಲ ಭಂಡಾರಿ.ಹೆಚ್ (ಕಾರ್ಕಳ)

ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು

ಅ) ಕರಾವಳಿಯ ದಕ್ಷಿಣ ಕನ್ನಡ ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿನ ಪ್ರವಾಸೀ ತಾಣಗಳು ಯಾವುವು; ಅಲ್ಲಿರುವ ಸೌಲಭ್ಯಗಳೇನು;

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಗುರುತಿಸಿರುವ ಪ್ರವಾಸಿ ತಾಣಗಳು:– ಸೂರತ್ಕಲ್, ಪಣಂಬೂರ್, ಉಲ್ಲಾಳ ಸೋಮೇಶ್ವರ, ಕಟೀಲು ಧರ್ಮಸ್ಥಳ, ವೇಣೂರು ಸುಬ್ರಹ್ಮಣ್ಯ, ಬೇಂದ್ರತೀರ್ಥ ಶಿರಾಡಿ, ಉಪ್ಪಿನಂಗಡಿ,

ಪಣಂಬೂರು, ಸೋಮೇಶ್ವರ, ಉಲ್ಲಾಳ, ಕಟೀಲು, ಸುಬ್ರಹ್ಮಣ್ಯಗಳ ಬಳಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ ನಿರ್ಮಿಸಲಾಗಿದೆ.

ಉಡುಪಿ ಜಿಲ್ಲೆಯಲ್ಲಿ ಗುರುತಿಸಿರುವ ಪ್ರವಾಸಿ ತಾಣಗಳು:– ಉಡುಪಿ, ಮಲ್ಪೆ, ಸೆಂಟ್ ಮೇರಿ ದ್ವೀಪ, ಕಾಪು, ಕಾರ್ಕಳ, ಮೂಡುಬಿದ್ರೆ, ಕುಂದಾಪುರ, ಮರವಂತೆ, ಕೊಲ್ಲೂರು.

ಉಡುಪಿಯಲ್ಲಿ ಯಾತ್ರಿನಿವಾಸ ನಿರ್ಮಿಸಲಾಗಿದೆ. ಕಾರ್ಕಳ, ಮೂಡುಬಿದರಿ, ಕೊಲ್ಲೂರು ಕಾಪುಗಳ ಬಳಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ನಿರ್ಮಿಸಲಾಗಿದೆ.

ಮಲ್ಪೆ ಮತ್ತು ಮರವಂತೆ ಕಡಲ ತೀರಗಳಲ್ಲಿ ಪ್ರವಾಸಿ ಸೌಲಭ್ಯಗಳನ್ನು ನಿರ್ಮಿಸಲಾಗಿದ್ದು, ಸಧ್ಯದಲ್ಲಿ ಅವು ದುರಸ್ಥಿಯಲ್ಲಿವೆ.

ಉತ್ತರಕನ್ನಡ ಜಿಲ್ಲೆಯಲ್ಲಿ ಗುರುತಿಸಿರುವ ಪ್ರವಾಸಿ ತಾಣಗಳು:– ಕಾರವಾರ, ಕೋರ್ಮಗಡ, ಅಂಜದೀವ್ ದ್ವೀಪ, ದೇವಗಡ, ಉಳವಿ, ರಾಮನಗರ, ಕ್ಯಾಸಲ್ ರಾಕ್, ಮಾಗೋಡು ಜಲಪಾತ, ಲಾಲಗುಲಿ ಜಲಪಾತ, ಹಳಿಯಾಳ, ದಾಂಡೇಲಿ, ಸಿದ್ದಾಪುರ, ಉಂಚಳ್ಳಿ ಜಲಪಾತ, ಸಿರಸಿ, ಸೋಂದಾ, ಬನವಾಸಿ, ಗೋಕರ್ಣ, ಯಾಣ, ಧಾರೇಶ್ವರ, ಅಂಕೋಲ, ಮುರುಡೇಶ್ವರ, ಬಸವರಾದುರ್ಗ, ಇಡಗುಂಜಿ,

ಕಾರವಾರದ ಟ್ಯಾಗೋರ್ ಬೀಚನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗಿದೆ. ಸಿರಿಸಿ, ಸೋಂದಾ, ಬನವಾಸಿ, ಗೋಕರ್ಣ, ೦೧ ಬೀಚ್‌ಗಳ ಬಳಿ ಬಸತಿ ಸೌಲಭ್ಯಗಳನ್ನು ನಿರ್ಮಿಸಲಾಗಿದೆ.

ಅನ್ಮೋಡ್ ಮತ್ತು ರಾಮನಗರಗಳ ಬಳಿ ಹೆದ್ದಾರಿ ಸೌಲಭ್ಯಗಳನ್ನು ನಿರ್ಮಿಸಲಾಗಿದೆ. ಇತರೆ 20 ಪ್ರವಾಸಿ ತಾಣಗಳಲ್ಲಿ ಸೂಕ್ತ ಪ್ರವಾಸಿ ಸೌಲಭ್ಯ ಕಲ್ಪಿಸಲು ಅನುದಾನವನ್ನು ಜಿಲ್ಲಾಧಿಕಾರಿಗಳು, ಉತ್ತರಕನ್ನಡ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲಾಗಿದೆ.

ಆ) ಕಾರ್ಕಳ ಜೈನ ಧರ್ಮದ ಅನೇಕ ಪ್ರವಾಸಿ, ತಾಣಗಳ ಕೇಂದ್ರವಾಗಿದ್ದು ಇಲ್ಲಿ ಬಾಹುಬಲಿ ಮೂರ್ತಿಯನ್ನು ನೋಡಲು ದೊಡ್ಡ ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಿದ್ದು, ಒಂದು ಯಾತ್ರಿನಿವಾಸದ ಪ್ರಸ್ತಾವನೆ ಇದ್ದು, ಅದು ಯಾವ ಹಂತದಲ್ಲಿದೆ/

ಕಾರ್ಕಳದಲ್ಲಿ ಯಾತ್ರಿನಿವಾಸವನ್ನು ನಿರ್ಮಿಸಲು ಕ್ರಮಕೈಗೊಂಡಿದೆ. ಜಿಲ್ಲಾಡಳಿತವು ಈ ಯೋಜನೆಯನ್ನು ಹೌಸಿಂಗ್ ಬೋರ್ಡಿಗೆ ವಹಿಸಿರುತ್ತದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು ಕಾಮಗಾರಿಯನ್ನು ಆರಂಭಿಸಲಾಗಿದೆ. construction of

ಇ) ಈ ಯಾತ್ರಿ ನಿವಾಸವನ್ನು ನಿರ್ಮಿಸಲು ಬೇಕಾಗುವ ಮೊತ್ತವೆಷ್ಟು ಮತ್ತು ಯಾವಾಗ ನಿರ್ಮಿಸಲಾಗುವುದು?

ಕಾರ್ಕಳದಲ್ಲಿ ರೂ.93.00 ಲಕ್ಷಗಳ ವೆಚ್ಚದಲ್ಲಿ ಯಾತ್ರಿನಿವಾಸವನ್ನು ನಿರ್ಮಿಸಲಾಗುತ್ತಿದೆ. ಕಾಮಗಾರಿ ಪ್ರಗತಿಯಲ್ಲಿದೆ.

252 ಶ್ರೀ ಗೋಪಾಲ ಭಂಡಾರಿ ಹೆಚ್ (ಕಾರ್ಕಳ)

ಮಾನ್ಯ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರ ಸಚಿವರು.

ಅ ಕಾರ್ಕಳ ಪುರಸಭೆಯ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಕೆಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಯಾವ ರೀತಿಯಲ್ಲಿ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುವಂತೆ ಮಾಡಲಾಗುವುದು?

– ಬಂದಿದೆ –

ವ್ಯವಸ್ಥಿತವಾಗಿಕಾರ್ಯನಿರ್ವಹಿಸಲು ಒಳಚರಂಡಿ ಯೋಜನೆಯನ್ನು ಪುನರ್ ನಿರ್ಮಾಣ ಮಾಡಲು ಸರ್ವೆ ಕಾರ್ಯಗಳನ್ನು ಸ್ಥಳೀಯ ಸಂಸ್ಥೆಯು ಕೈಗೆತ್ತಿಕೊಂಡಿದೆ.

ಆ ಈ ಒಳಚರಂಡಿ ಯೋಜನೆಯಿಂದ ಎಷ್ಟು ಬಾವಿಗಳು ಕೆಟ್ಟು ಹೋಗಿವೆ; ಹೊಸ ವಿನ್ಯಾಸದೊಂದಿಗೆ ಒಳಚರಂಡಿಯನ್ನು ಮತ್ತು ಟ್ರೀಟ್‌ಮೆಂಟ್ ಪ್ಲಾಂಟನ್ನು ಅಭಿವೃದ್ಧಿಪಡಿಸಲಾಗುವುದು ಮತ್ತು ಇದಕ್ಕೆ ತಗಲುವ ಹಣವೆಷ್ಟು?

ಒಳಚರಂಡಿ ಯೋಜನೆಯ ತೊಂದರೆಯಿಂದಾಗಿ ಪುರಸಭಾ ವ್ಯಾಪ್ತಿಯಲ್ಲಿ ಎರಡು ಬಾವಿಗಳು ಕೆಟ್ಟು ಹೋಗಿವೆ.

ಕಾರ್ಕಳ ಎರಡನೇ ಹಂತದ ಒಳಚರಂಡಿ ಯೋಜನೆಗೆ ಸರ್ವೆ ಕಾರ್ಯಕೈಗೊಂಡು ಅಂದಾಜು ಪಟ್ಟಿ ತಯಾರಿಸಲಾಗುವುದು. ಈ ಯೋಜನೆಗೆ ರೇಖಾ ಅಂದಾಜಿನಂತೆ ಸುಮಾರು ರೂ. 20.00 ಕೋಟಿಗಳ ಹಣ ಅಗತ್ಯವಿದೆಯೆಂದು ಅಂದಾಜಿಸಲಾಗಿದೆ.

ಇ ಕಾರ್ಕಳ ನಗರ ನೀರು ಸರಬರಾಜು ಯೋಜನೆಯ ನೀರಿನ ಟ್ಯಾಂಕ್ ಬಿದ್ದುಹೋಗಿದ್ದು, ಅದನ್ನು ಹೊಸದಾಗಿ ನಿರ್ಮಿಸುವ ವಿಶೇಷ ಅನುದಾನವನ್ನು ಬಿಡುಗಡೆ ಮಾಡಲಾಗುವುದೇ?

10 ಲಕ್ಷ ಲೀಟರ್ ಸಾಮರ್ಥ್ಯದ ಒಂದು ಹೊಸ ಮೆಲ್ಮಟ್ಟದ ಜಲ ಸಂಗ್ರಹಾಗಾರವನ್ನು ಕಾರ್ಕಳ ಪುರಸಭಾ ಠೇವಣಿ ಕೊಡಿಗೆ ಆಧಾರದ ಮೇಲೆ ಕೈಗೊಳ್ಳಲಾಗುತ್ತಿದೆ. ಸದರಿ ಕಾಮಗಾರಿಗೆ ರೂ.113.50 ಲಕ್ಷಗಳನ್ನು ಪುರಸಭೆಯು ಮಂಡಳಿಗೆ ಸಂದಾಯ ಮಾಡಿರುತ್ತದೆ.